## ಮೇಕಪ್ ರಹಿತ ಚಿತ್ರ ನಿರ್ದೇಶಕ

# ಕಲ್ಯಾಣಕುಮಾರ್



**ಕನ್ನಡದ ಪ್ರತಿಭಾವಂತ ನಾಯಕ ನಟ ಕಲ್ಯಾಣಕುಮಾರ್ ನಿಧನರಾಗಿ ಆಗಸ್ಟ್ 1ಕ್ಕೆ 11 ವರ್ಷ. ಆದರೂ ಅವರ ನೆನಪು ಕನ್ನಡ ಚಿತ್ರ ರಸಿಕರಲ್ಲಿ ಸದಾ ಅಚ್ಚಳಿಯದೆ ಹಸಿರಾಗಿ ನಿಂತಿದೆ.**

★ ಸಾರ್ಥವಳ್ಳಿ ನಾರಾಯಣಸ್ವಾಮಿ

ಹಿಂದಿ ಚಿತ್ರರಂಗದ ನಟರಂತೆ ಸ್ಟೈಲಿಷ್ ಆಗಿ ಇದ್ದವರೂ ಮತ್ತು ಕನ್ನಡ ಚಿತ್ರರಂಗ ಕಂಡಂತಹ ಅತ್ಯಂತ ಸುಂದರ ಕಲಾವಿದ ಕಲ್ಯಾಣಕುಮಾರ್.

ಬೆಂಗಳೂರಿನ ಬಸವನಗುಡಿಯ ರಾಘವಾಚಾರ್ಯ ಹಾಗೂ ಕಲ್ಯಾಣಮ್ಮ ದಂಪತಿಗೆ 1928ರ ಜುಲೈ 13ರಂದು ಜನಿಸಿದ ಅವರು ತಮ್ಮ ಶಾಲಾ ಕಾಲೇಜು ದಿನಗಳಲ್ಲಿ ನಾಟಕದಲ್ಲಿ ಅಭಿನಯಿಸುವ ವೇಳೆಯಲ್ಲಿಯೇ ಚಿತ್ರರಂಗದ ಕನಸನ್ನು ಕಂಡವರು.

ನ್ಯಾಷನಲ್ ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಸಿನಿಮಾ ಗೀಳು ಹತ್ತಿಸಿಕೊಂಡು, ತಮ್ಮ ಭವಿಷ್ಯವನ್ನು ಅರಸಿ ಮುಂಬೈಗೆ ಪ್ರಯಾಣ ಮಾಡಿ ಹಿಂದಿ ಚಿತ್ರರಂಗದಲ್ಲಿ ಅವಕಾಶ ಸಿಗದೆ ನಿರಾಶರಾಗಿ ಮತ್ತೆ ಕರ್ನಾಟಕಕ್ಕೆ ಬಂದಾಗ ಕನ್ನಡ ಚಿತ್ರಗಳಲ್ಲಿ ನಟಿಸುವ ಅದೃಷ್ಟದ ಬಾಗಿಲು ಅವರಿಗೆ ತೆರೆದಿತ್ತು. ಸಿ.ವಿ. ರಾಜು ನಿರ್ದೇಶನದ ನಟ ಶೇಖರ (1954) ಅವರ ಮೊದಲ ಚಿತ್ರ. ಚಿತ್ರದ ಬಿಡುಗಡೆಯ ನಂತರ ಕನ್ನಡ ಚಿತ್ರ ಪ್ರೇಮಿಗಳು ಅತ್ಯಂತ ಸಂತೋಷದಿಂದ ಈ ಸುಂದರ ನಟನನ್ನು ಸ್ವಾಗತಿಸಿದರು. ನಂತರ ಬಂದ 'ಬೆಟ್ಟದ ಕಳ್ಳ', 'ಪ್ರೇಮದ ಪುತ್ರಿ', 'ರಾಯರ ಸೊಸೆ' ಮುಂತಾದ ಚಿತ್ರಗಳು ಅವರು ಚಿತ್ರರಂಗದಲ್ಲಿ ಬೇರೂರಲು ಸಹಕಾರಿಯಾಗಿತ್ತು. ಸದಾರಮೆ ಅವರ ಐದನೇ ಚಿತ್ರ. ಆ ಚಿತ್ರದ ಕಳ್ಳನ ಪಾತ್ರದ ಅಭಿನಯ ಅವರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿತು.

ಅವರ ಅಭಿನಯಕ್ಕೆ ಮಾರು ಹೋಗಿ ತಮಿಳು ಚಿತ್ರರಂಗದ ಖ್ಯಾತ ನಿರ್ದೇಶಕರಾದ ಸಿ.ವಿ. ಶ್ರೀಧರ್‌ರವರು ನೆಂಜಿಲ್ ಒರು ಆಲಯಂ ತಮಿಳು ಚಿತ್ರದಲ್ಲಿ ನಾಯಕನ ಪಾತ್ರದಲ್ಲಿ ಅವಕಾಶ ನೀಡಿದರು. ಆ ಚಿತ್ರ ತಮಿಳುನಾಡಿನಲ್ಲಿ ಅತ್ಯಂತ ಜನಪ್ರಿಯವಾಗಿ ಆ ಭಾಷಾ ಚಿತ್ರರಂಗದ ಅತಿರಥ ಮಹಾರಥರ ಮಟ್ಟದಲ್ಲಿಯೇ ಕಲ್ಯಾಣ ಮೆರೆದರು. ಆನಂತರ ಸಾಲಾಗಿ ಬಂದಂತಹ ನೆಂಜಂ ಮರಪ್ಪದಿಲ್ಲೈ, ತಾಯಿನ್ ಕರುಣೈ, ಪೋಲೀಸ್‌ಕಾರನ್ ಮಗಳ್ ಮುಂತಾದ ಚಿತ್ರಗಳು ಕಲ್ಯಾಣ್‌ಕುಮಾರ್ ಒಬ್ಬ ಪ್ರತಿಭಾವಂತ ಕಲಾವಿದ ಎಂದು ತೋರಿಸಿಕೊಟ್ಟವು.

ತನಗೆ ಅನ್ನ ಕೊಟ್ಟಂತಹ ಚಿತ್ರರಂಗಕ್ಕೆ ಏನಾದರೂ ಮಾಡಬೇಕೆನ್ನುವ ಬಯಕೆಯಿಂದ ಪ್ರಥಮ ಬಾರಿಗೆ ಮೇಕಪ್ ಇಲ್ಲದೆ 'ಎಂದೂ ನಿನ್ನವನೇ' ಚಿತ್ರ ನಿರ್ದೇಶಿಸಿದರು. ನಂತರ ಸ್ಟುಡಿಯೋ ಸಹಕಾರವಿಲ್ಲದೆ ನಿರ್ಮಿಸಿದ ಚಿತ್ರ 'ಪ್ರವಾಸಿ ಮಂದಿರ.' ಭಾರತಿ ವಿಷ್ಣುವರ್ಧನ್‌ರವರನ್ನು 'ಲವ್ ಇನ್ ಬೆಂಗಳೂರು' ಎನ್ನುವ ಚಿತ್ರದ ಮೂಲಕ ತೆರೆಗೆ ತಂದಂತಹ ಖ್ಯಾತಿ ಕೂಡ ಅವರದು. ತಮ್ಮ ಪತ್ನಿ ರೇವತಿಯೊಂದಿಗೆ 'ಕಲ್ಲುಸಕ್ಕರೆ' ಕನ್ನಡ ಚಿತ್ರ ನಿರ್ದೇಶಿಸಿದರು. ಕನ್ನಡದ ಪ್ರಪ್ರಥಮ ವರ್ಣಚಿತ್ರದ 'ಅಮರಶಿಲ್ಪಿ ಜಕಣಾಚಾರಿ' ನಾಯಕ ಹಾಗೂ ಕನ್ನಡದ ಪ್ರಥಮ ದ್ವಿಪಾತ್ರ 'ದೈವಲೀಲೆ' ಅಭಿನಯದ ಚಿತ್ರದ ನಾಯಕನೆನಿಸಿಕೊಂಡ ಅವರು, ತಮಿಳು ನಾಡಿನ ಮಾಜಿ ಮುಖ್ಯಮಂತ್ರಿ ಕುಮಾರಿ ಜಯಲಲಿತಾ ಅವರು ನಟಿಸಿದ ಆರು ಕನ್ನಡ ಚಿತ್ರಗಳಲ್ಲಿ ಆಕೆಗೆ ಅವರೇ ನಾಯಕರು. ಕಣಗಾಲ್ ಪುಟ್ಟಣ್ಣನವರ 'ಬೆಳ್ಳಿಮೋಡ' ಚಿತ್ರದ ಮೂಲಕ ಒಬ್ಬ ನೆಗೆಟಿವ್ ಹೀರೊ ಆಗಿ ಕನ್ನಡ ಚಿತ್ರ ರಸಿಕರ ಮನ ಗೆದ್ದವರು.

ಚಿತ್ರಗಳಲ್ಲಿ ಅಭಿನಯಿಸುವುದರ ಜೊತೆಗೆ ಅಶಕ್ತ ಕಲಾವಿದರ ಕಲ್ಯಾಣ ಸಮಿತಿಯನ್ನು ರಚಿಸಿ ಆ ಮೂಲಕ ಕಷ್ಟದಲ್ಲಿರುವ ಕಲಾವಿದರಿಗೆ ಸಹಾಯ ನೀಡುವ ಉದಾರ ಮನಸ್ಸು. ಹೋಟೆಲ್ ಬಿಸಿನೆಸ್ (ಹೋಟೆಲ್ ನವರಸ್)– ಇವೆಲ್ಲವೂ ಕಲ್ಯಾಣರವರನ್ನು ಚಿತ್ರರಂಗದಿಂದ ದೂರ ಮಾಡಿದವಲ್ಲದೆ ನಷ್ಟಕ್ಕೆ ತಳ್ಳಿದವು. ಕಲ್ಯಾಣರವರ ಪಾಲಿಗೆ ನಿಜವಾಗಿಯೂ ದೇವರಂತೆ ಬಂದವರು ನಿರ್ಮಾಪಕ ಅಬ್ಬಾಯಿ ನಾಯ್ಡು. 'ತಾಯಿಯ ನುಡಿ' ಚಿತ್ರದ ಮೂಲಕ ಮರೆಯಾಗಿದ್ದ ಕಲ್ಯಾಣ್ ಅವರನ್ನು ಮತ್ತೆ ಚಿತ್ರರಂಗದಲ್ಲಿ ಮೆರೆಯುವಂತೆ ಮಾಡಿದರು ನಾಯ್ಡು.

ತಾಯಿಯ ಬಗ್ಗೆ ಅತ್ಯಂತ ಪ್ರೀತಿಯನ್ನು ಹೊಂದಿದ್ದ ಬೊಕ್ಕಣ್ಣ ಎಂಬ ಹೆಸರನ್ನು ಕಲ್ಯಾಣಮ್ಮನವರ ಮಗ ಕಲ್ಯಾಣಕುಮಾರ್ ಎಂದು ಬದಲಾಯಿಸಿಕೊಂಡು ತಾಯಿಯ ಹೆಸರಿನ ಚಿತ್ರದ ಮೂಲಕವೇ ಪುರ್ನಜನ್ಮ ಪಡೆದವರು. 'ನೀ ಏನೇ ಮಾಡು ಹೆದರುವೆನೇನು... ಬಾಳುವೆನು ನೋಡು... ಬದುಕುವೆನು ನೋಡು...' ಎಂದು ದೇವರಿಗೆ ಸವಾಲೆಸೆದು ನಂತರ ಹಲವಾರು ಚಿತ್ರಗಳಲ್ಲಿ ತಮ್ಮ ಅಭಿನಯದ ಮೂಲಕ ಕನ್ನಡಿಗರ ಮನಗೆದ್ದ ಕಲ್ಯಾಣಕುಮಾರ್‌ಗೆ ಸಾವಿಲ್ಲ. ■



ಹಿರಿಯ ನಟಿ ಜಯಂತಿ ಅವರೊಂದಿಗೆ